# POLICE PUBLIC SCHOOL

(Managed by PPS( CBSE) TRUST)
Koramangala, Bengaluru-560034, Karnataka
e-mail: ppsk.bssc@gmail.com
Website: www.policepublicschoolksrpblr.org
Telephone No: 080-25506765,
6362598124

## VIBES JUNE 2025

ಹೊಸ ಶೈಕ್ಷಣಿಕ ವರ್ಷಗಕ್ಕೆ ಪಿಪಿಎಸ್‌ಗೆ ಸ್ವಾಗತ! ಹೊಸ ಅಧ್ಯಾಯದೊಂದಿಗೆ ಹೊಸ ಶೈಕ್ಷಣಿಕ ವರ್ಷ ಆರಂಭವಾಗುತ್ತಿದೆ. ಕಲಿಕೆ ಮತ್ತು ಬೆಳವಣಿಗೆಗಳಿಂದ ತುಂಬಿದ ಹೊಸ ಶೈಕ್ಷಣಿಕ ವರ್ಷದ ಆರಂಭದಲ್ಲಿ ನಮ್ಮ ಎಲ್ಲಾ ಓದುಗರಿಗೆ ಹಾರ್ದಿಕ ಸ್ವಾಗತ. ಈ ವೈಬ್ಸ್ ಸಂಚಿಕೆಯು ನಮ್ಮ ಶಾಲಾ ಸುದ್ದಿಪತ್ರಿಕೆಯಾಗಿ, ಶಾಲೆಯ ಚಟುವಟಿಕೆಗಳು ಮತ್ತು ಸಾಧನೆಗಳ ಸವಿವರವನ್ನು ನೀಡುತ್ತದೆ.

### ನೂತನ ಪ್ರಾಂಶುಪಾಲರಾದ – ಶ್ರೀಮತಿ ರಾಧಿಕ ಗೋಸ್ವಾಮಿ ರವರಿಗೆ ಸ್ವಾಗತ

ಶ್ರೀಮತಿ ರಾಧಿಕ ಗೋಸ್ವಾಮಿ ರವರನ್ನು ಪೊಲೀಸ್ ಪಬ್ಲಿಕ್ ಶಾಲೆಯ ನೂತನ ಪ್ರಾಂಶುಪಾಲರಾಗಿ ನೇಮಕ ಮಾಡಿರುವುದು ಹೆಮ್ಮೆಯ ವಿಷಯವಾಗಿದೆ. ಅವರು ನಮ್ಮ ಶಾಲೆಯ ಅಭಿವೃದ್ಧಿ ಮತ್ತು ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಅಮೂಲ್ಯವಾದ ಸಹಕಾರ ಮತ್ತು ಮಾರ್ಗದರ್ಶನ ನೀಡುತ್ತಾರೆ ಎಂದು ಆಶಯವಿದೆ. ಪೊಲೀಸ್ ಪಬ್ಲಿಕ್ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಶಿಕ್ಷಕರು ಹಾಗೂ ಸಿಬ್ಬಂದಿಗಳಿಂದ ಶ್ರೀಮತಿ ರಾಧಿಕಾ ಗೋಸ್ವಾಮಿ ರವರಿಗೆ ಹಾರ್ದಿಕ ಶುಭಾಶಯವನ್ನು ಕೋರುತ್ತೇವೆ.

### ಸಿಬಿಎಸ್‌ಸಿ 10ನೇ ತರಗತಿಯ ಫಲಿತಾಂಶ –2025

ಈ ಶಾಲೆಯ 2024–25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸಿಬಿಎಸ್‌ಸಿ 10ನೇ ತರಗತಿಯ ಬೋರ್ಡ್ ಪರೀಕ್ಷೆಗಳಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿಗಳು ಶೇಕಡ 100% ಉತ್ತೀರ್ಣರಾಗಿದ್ದು, ಶಾಲೆಗೆ ಕೀರ್ತಿ ತಂದಿರುತ್ತಾರೆ. ಇದು ಶಾಲೆಯ ಶೈಕ್ಷಣಿಕ ಗುಣಮಟ್ಟಕ್ಕೆ ಸಾಕ್ಷಿಯಾಗಿದೆ. ಸಾಗರ್.ಎಸ್.ದಳವಾಯಿ ಅವರು ವಿಜ್ಞಾನದ ವಿಷಯದಲ್ಲಿ ಶೇ.100 ಅಂಕಗಳನ್ನು ಗಳಿಸಿರುವುದನ್ನು ಸ್ಮರಿಸಬಹುದಾಗಿದೆ. ಎಲ್ಲಾ ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರಿಗೆ ಈ ಉತ್ಕೃಷ್ಟ ಫಲಿತಾಂಶಕ್ಕಾಗಿ ಹೃದಯಪೂರ್ವಕ ಅಭಿನಂದನೆಗಳು.




### ಶಿಕ್ಷಕರ ತರಬೇತಿ ಕಾರ್ಯಾಗಾರ

ಪೊಲೀಸ್ ಪಬ್ಲಿಕ್ ಶಾಲೆ, ಕೋರಮಂಗಲ, ಬೆಂಗಳೂರಿನಲ್ಲಿ ಶಿಕ್ಷಕರ ವೃತ್ತಿಪರ ಕೌಶಲ್ಯಗಳು ಮತ್ತು ಬೋಧನಾ ವಿಧಾನಗಳನ್ನು ವೃದ್ಧಿಸುವ ಉದ್ದೇಶದಿಂದ ನಾಲ್ಕು ದಿನಗಳ ಸೇವಾನಿರತ ಶಿಕ್ಷಕರ ತರಬೇತಿ ಕಾರ್ಯಾಗಾರವನ್ನು ದಿನಾಂಕ:27/05/2025 ರಿಂದ 30/05/2025 ರವರೆಗೆ ಆಯೋಜಿಸಲಾಗಿತ್ತು.
ಈ ಕಾರ್ಯಾಗಾರದಲ್ಲಿ ಶ್ರೀ ದೀಪನ್.ಎಂ.ಎನ್, ಐಪಿಎಸ್, ಡಿಐಜಿಪಿ, ಕೆಎಸ್‌ಆರ್‌ಪಿ, ಮತ್ತು ಕಾರ್ಯದರ್ಶಿ, ಪಿಪಿಎಸ್, ಶ್ರೀ ರಘುನಾಥ.ಕೆ.ಎಸ್, ಕಮಾಂಡೆಂಟ್, 3ನೇ ಪಡೆ, ಕೆಎಸ್‌ಆರ್‌ಪಿ, ಮತ್ತು ಸಹಾಯಕ ಕಾರ್ಯದರ್ಶಿ, ಪಿಪಿಎಸ್, ಶ್ರೀಮತಿ ರಾಧಿಕಾ ಗೋಸ್ವಾಮಿ, ಪ್ರಾಂಶುಪಾಲರು, ಪಿಪಿಎಸ್, ಶ್ರೀಮತಿ ಅರ್ಚನಾ ಗುಪ್ತಾ, ಮುಖ್ಯೋಪಾಧ್ಯಾಯರು, ಪಿಪಿಎಸ್, ಉಪಸ್ಥಿತರಿದ್ದರು, ಮೊದಲನೆಯ ದಿನದ ಕಾರ್ಯಾಗಾರವನ್ನು ಉದ್ಘಾಟನೆಯೊಂದಿಗೆ ಪ್ರಾರಂಭವಾಯಿತು, ಸ್ವಾಗತ ಭಾಷಣದ ನಂತರ ನೂತನ ಶಿಕ್ಷಕರಿಗೆ ಹಾರ್ದಿಕ ಸ್ವಾಗತ ಕೋರಲಾಯಿತು. ಮತ್ತು ಸಭೆಗೆ ಪರಿಚಯಿಸುವಂತೆ ಆಹ್ವಾನಿಸಲಾಯಿತು. ಮುಖ್ಯ ಅತಿಥಿಗಳು ಶಿಕ್ಷಕರೊಂದಿಗೆ ಸಂವಾದ ನಡೆಸಿ, ಶೈಕ್ಷಣಿಕ ಫಲಿತಾಂಶಗಳನ್ನು ಸುಧಾರಿಸುವಲ್ಲಿ ಶಿಕ್ಷಕರು ಹೇಗೆ ಕಾರ್ಯನಿರ್ವಹಿಸಬಹುದು ಎಂಬುದರ ಕುರಿತು ವಿವರವಾಗಿ ಹಂಚಿಕೊಂಡರು. ಅವರು ತಮ್ಮ ಭಾಷಣದಲ್ಲಿ ಈ ರೀತಿಯ ಕಾರ್ಯಕ್ರಮಗಳು ಶಾಲೆಯ ಶೈಕ್ಷಣಿಕ ಗುಣಮಟ್ಟ, ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಮತ್ತು ಒಟ್ಟಾರೆ ಬೆಳವಣಿಗೆಯನ್ನೂ ಉತ್ತೇಜಿಸುತ್ತದೆ ಎಂದು ಹೇಳಿದರು.









ಶ್ರೀಮತಿ ಮೋನಿಕಾ ಮೂರ್ತಿ ರವರು 21ನೇ ಶತಮಾನದ ಕೌಶಲ್ಯಗಳನ್ನು ತರಗತಿಯಲ್ಲಿ ಹೇಗೆ ಅಳವಡಿಸಿಕೊಳ್ಳಬೇಕೆಂಬುದರ ಕುರಿತು ಆಳವಾದ ವಿವರಣೆ ನೀಡಿದರು. ಅವರು ತಮ್ಮ ಕಾರ್ಯಗಾರದಲ್ಲಿ ಸೃಜನಶೀಲತೆ, ಸಹಕಾರ ಸಂವಹನ, ಡಿಜಿಟಲ್ ಸಾಕ್ಷರತೆ, ನಾವೀನ್ಯತೆ, ನಾಯಕತ್ವ, ಸಾಮಾಜಿಕ ಕೌಶಲ್ಯಗಳು ಮತ್ತು ಆಟದ ಮಾದರಿಯಲ್ಲಿ ಕಲಿಕೆಯನ್ನು ಒಳಗೊಂಡ ಪ್ರಮುಖ ಸಾಮರ್ಥ್ಯಗಳನ್ನು ವಿವರಿಸಿದರು. ಉದಾಹರಣೆಗಳು ಮತ್ತು ಸಂವಾದಾತ್ಮಕ ಚಟುವಟಿಕೆಗಳ ಮೂಲಕ ಶಿಕ್ಷಣವನ್ನು ಇನ್ನಷ್ಟು ಕ್ರಿಯಾತ್ಮಕಗೊಳಿಸಲು ಶಿಕ್ಷಕರು ಬಳಸಬಹುದಾದ ಜಾಣ್ಮೆಯುತ ತಂತ್ರಗಳನ್ನು ಅವರು ಹಂಚಿಕೊಂಡರು. ಶಿಕ್ಷಕರು ಕೇವಲ ಭೋಧಕರು ಮಾತ್ರವಲ್ಲದೇ ಮಾರ್ಗದರ್ಶಕರಾಗಿಯೂ, ತಮ್ಮ ಕಾರ್ಯ ನಿರ್ವಹಿಸುವಂತೆ ಪ್ರೇರೇಪಿಸಿದರು.

ಶ್ರೀಮತಿ ವಾಣಿಶೀ ರವರು ತರಗತಿಯಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಬಗ್ಗೆ.

ಶ್ರೀ ಸಾರ್ಥಕ್ ಸಂತು ರವರು ಕೃತಕ ಬುದ್ದಿ ಮತ್ತೆ ಉಪಕರಣಗಳು ಮತ್ತು ಕಂಪ್ಯೂಟರ್‌ಗಳ ಬಗ್ಗೆ

ಶ್ರೀಮತಿ ಮೇಘನಾ ಹನುಮೇಶ್ ರವರು ವೃತ್ತಿ ನೈತಿಕತೆ ಮತ್ತು ಮೌಲ್ಯಗಳ ಕುರಿತು










**ನೂತನ ಸಹಾಯಕ ಕಾರ್ಯದರ್ಶಿ ಶ್ರೀ ಜನಾರ್ಧನ್.ಆರ್, ಕೆಎಸ್‌ಪಿಎಸ್, ಕಮಾಂಡೆಂಟ್, 4ನೇ ಪಡೆ, ಕೆಎಸ್‌ಆರ್‌ಪಿ, ರವರಿಗೆ ಸುಸ್ವಾಗತ**

ಶ್ರೀ ಜನಾರ್ಧನ್.ಆರ್, ಕೆಎಸ್‌ಪಿಎಸ್, ಕಮಾಂಡೆಂಟ್, 4ನೇ ಪಡೆ, ಕೆಎಸ್‌ಆರ್‌ಪಿ, ಇವರು ನಮ್ಮ ಶಾಲೆಗೆ ನೂತನ ಸಹಾಯಕ ಕಾರ್ಯದರ್ಶಿಗಳಾಗಿ ಆಯ್ಕೆಯಾಗಿರುವುದಕ್ಕೆ ಅವರನ್ನು ಸಂತೋಷದಿಂದ ಸ್ವಾಗತಿಸುತ್ತೇವೆ. ಅವರ ಅನುಭವವ್ಯಾಪ್ತಿ ಮತ್ತು ಸಲಹೆಯು ಶಾಲೆಯ ಪ್ರಗತಿ ಮತ್ತು ಯಶಸ್ಸಿಗೆ ಅವಶ್ಯವಾಗಿದೆ ಎಂದು ನಾವು ವಿಶ್ವಾಸ ಹೊಂದಿದ್ದೇವೆ. ಶಾಲೆಯ ಆಡಳಿತ ಮತ್ತು ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಅವರ ಅಮೂಲ್ಯ ಮಾರ್ಗದರ್ಶನ ಮತ್ತು ಕೊಡುಗೆ ಬಯಸುತ್ತೇವೆ.











### ಶಾಲಾ ಪ್ರಾರಂಭೋತ್ಸವ.

ಪ್ರಸಕ್ತ ಶೈಕ್ಷಣಿಕ ವರ್ಷದ ಪುನರಾರಂಭ ಕಾರ್ಯಕ್ರಮವನ್ನು ಸಂಭ್ರಮದಿಂದ ಪ್ರಾರಂಭಿಸಲಾಯಿತು. 1ನೇ ತರಗತಿಯಿಂದ 12ನೇ ತರಗತಿವರೆಗೆ ಜೂನ್ 2, 2025 ರಂದು ಮತ್ತು ಎಲ್‌ಕೆಜಿ ಹಾಗೂ ಯುಕೆಜಿ ತರಗತಿಗಳಿಗೆ ಜೂನ್ 4 ರಂದು ಮತ್ತು ನರ್ಸರಿಗಾಗಿ ಜೂನ್ 9 ರಂದು ಪುನರಾರಂಭಿಸಲಾಯಿತು. ಶಿಕ್ಷಕರು ಮಕ್ಕಳನ್ನು ಸ್ವಾಗತದ ಕಾರ್ಡ ನೀಡಿ ಆತ್ಮೀಯವಾಗಿ ಬರಮಾಡಿಕೊಂಡರು ಹಾಗೂ ಉತ್ಸಾಹಭರಿತ ವಾತಾವರಣವನ್ನು ನಿರ್ಮಿಸಿದರು. ವಿದ್ಯಾರ್ಥಿಗಳು ಖುಷಿಯಿಂದ ಮತ್ತು ಉಲ್ಲಾಸದಿಂದ ಶಾಲೆಗೆ ಬಂದು ಮೊದಲ ದಿನವನ್ನು ಆನಂದಿಸಿದರು














## ವಿಶ್ವ ಪರಿಸರ ದಿನ

ಶಾಲೆಯಲ್ಲಿ ಜೂನ್ 5, 2025 ರಂದು ವಿಶ್ವ ಪರಿಸರ ದಿನವನ್ನು "ಪ್ಲಾಸ್ಟಿಕ್ ಮಾಲಿನ್ಯ ತಡೆಗಟ್ಟಿರಿ" ಎಂಬ ಧ್ಯೇಯ ಸಂದೇಶದೊಂದಿಗೆ ಆಚರಿಸಲಾಯಿತು. ಎಲ್ಲಾ ತರಗತಿಗಳ ವಿದ್ಯಾರ್ಥಿಗಳು ಪರಿಸರ ಜಾಗೃತಿಯ ಕುರಿತು ಹಲವಾರು ಚಟುವಟಿಕೆಗಳಲ್ಲಿ ಭಾಗವಹಿಸಿದರು. ಪೂರ್ವ ಪ್ರಾಥಮಿಕ ವಿದ್ಯಾರ್ಥಿಗಳು ಮರದ ಎಲೆ ಬಳಸಿಕೊಂಡು ಕ್ರಿಯಾಶೀಲ ಚಟುವಟಿಕೆಗಳಲ್ಲಿ ತೊಡಗಿಕೊಂಡರು. ಪ್ರಾಥಮಿಕ ವಿದ್ಯಾರ್ಥಿಗಳು ಎಲೆಗಳು ಹೂವುಗಳು ಮತ್ತು ಕಲ್ಲುಗಳಿಂದ ಆಕರ್ಷಕ ಮಾದರಿ ವಸ್ತುಗಳನ್ನು ತಯಾರಿಸಿದರು. ಹಿರಿಯ ಪ್ರಾಥಮಿಕ ವಿದ್ಯಾರ್ಥಿಗಳು "ಬೆಸ್ಟ್ ಔಟ್ ಆಫ್ ವೇಸ್ಟ್" ಮರುಬಳಕೆಯ ಕಲಾ ಯೋಜನೆ ಮಾಡಿದರು, 9ನೇ ತರಗತಿಯ ವಿದ್ಯಾರ್ಥಿಗಳು ಕಾಗದದ ಮುಖವಾಡ ತಯಾರಿಸಿ ತಮ್ಮ ಸೃಜನಶೀಲತೆಯನ್ನು ವ್ಯಕ್ತಪಡಿಸಿದರು. 10ನೇ ತರಗತಿಯ ವಿದ್ಯಾರ್ಥಿಗಳು ಶಾಲಾ ಆವರಣವನ್ನು ಸ್ವಚ್ಛಗೊಳಿಸಿ ಶ್ರಮದಾನದ ಮೂಲಕ ತಮ್ಮ ಕೊಡುಗೆಯನ್ನು ನೀಡಿದರು. 1 ರಿಂದ 9ನೇ ತರಗತಿಯವರೆಗೆ ವಿದ್ಯಾರ್ಥಿಗಳು ಶಾಲೆಯ ಪರಿಸರ ಹಸಿರಾಗಿರಲು ಸಸಿಗಳನ್ನು ನಡುವ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಹಸಿರು ಭೂಮಿಗೆ ತಮ್ಮ ಬದ್ಧತೆಯನ್ನು ಪ್ರದರ್ಶಿಸಿದರು.























## ಪೋಷಕರಿಗೆ ಕಾರ್ಯಾಗಾರ

ಶಾಲಾ ಶಿಕ್ಷಣದಲ್ಲಿ ಪೋಷಕರ ಪಾಲ್ಗೊಳ್ಳುವಿಕೆಯ ಮಹತ್ವವನ್ನು ಮನಗಂಡು ಜೂನ್ 2025 ರ ಮೊದಲನೇ ವಾರದಲ್ಲಿ ಯುಕೆಜಿ ಯಿಂದ 10ನೇ ತರಗತಿವರೆಗೆ ಇರುವ ವಿದ್ಯಾರ್ಥಿಗಳ ಪೋಷಕರಿಗೆ ಕಾರ್ಯಾಗಾರ ಆಯೋಜಿಸಲಾಗಿತ್ತು. ಈ ಕಾರ್ಯಾಗಾರದ ಉದ್ದೇಶ ಪೋಷಕರಿಗೆ ಶಾಲೆಯ ನಿಯಮಗಳು, ಪ್ರಕ್ರಿಯೆಗಳು ಮತ್ತು ವಿದ್ಯಾಭ್ಯಾಸದ ವ್ಯವಸ್ಥೆ, ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಪೋಷಕರ ಪಾತ್ರ ಎಷ್ಟು ಪ್ರಮುಖ ಎಂಬುದನ್ನು ಪ್ರಸ್ತಾಪಿಸುವುದು. ಶಾಲೆಯ ಪ್ರಾಂಶುಪಾಲರು ಶ್ರೀಮತಿ ರಾಧಿಕಾ ಗೋಸ್ವಾಮಿ ರವರು ಸಮಾರಂಭವನ್ನು ಉದ್ಘಾಟಿಸಿ, ಶಾಲೆಯ ನಿಯಮಗಳು ಪಠ್ಯಕ್ರಮ ಮತ್ತು ಸಹಪಠ್ಯ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಶಿಕ್ಷಕರು ಕೂಡ ಭಾಗವಹಿಸಿ, ಮಕ್ಕಳ ಆರೋಗ್ಯ ಮತ್ತು ಸ್ವಚ್ಛತೆಯ ಬಗ್ಗೆ ಉಪಯುಕ್ತ ಮಾಹಿತಿಗಳನ್ನು ಹಂಚಿಕೊಂಡರು. ಪೋಷಕರಿಗೆ ಪ್ರಶ್ನೆ ಕೇಳುವ, ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶ ನೀಡಲಾಯಿತು. ಈ ಕಾರ್ಯಕ್ರಮದ ಮೂಲಕ ಪೋಷಕರು ಮಕ್ಕಳ ಬೆಳವಣಿಗೆಗೆ ಮತ್ತು ಶಾಲೆಯೊಂದಿಗೆ ಉತ್ತಮ ಸಂವಹನ ಬೆಳೆಸಿಕೊಳ್ಳುವ ಸಾಧ್ಯತೆ ದೊರೆಯಿತು.














## ವಿಜ್ಞಾನ ಶಿಕ್ಷಕರಿಗಾಗಿ ಸ್ಪಾರ್ಕ್ (SPARK) ತಂಡದಿಂದ ಕಾರ್ಯಾಗಾರ

ಜೂನ್ 10, 2025 ರಂದು ಶಾಲೆಯ ಭೌತಶಾಸ್ತ್ರ, ಪ್ರಯೋಗಾಲಯದಲ್ಲಿ ಸ್ಪಾರ್ಕ್ ತಂಡದವರು ವಿಜ್ಞಾನ ವಿಭಾಗದ ಎಲ್ಲಾ ಶಿಕ್ಷಕರಿಗಾಗಿ ವಿಶೇಷ ಕಾರ್ಯಗಾರವನ್ನು ಆಯೋಜಿಸಿದ್ದರು. ಇದರ ಉದ್ದೇಶ ಹೊಸ ಕಲಿಕಾ ವಿಧಾನಗಳನ್ನು ಪರಿಚಯಿಸುವುದು ಅನುಭವಾತ್ಮಕ ಕಲಿಕೆ ಪ್ರೇರೇಪಿಸುವುದು. ನಾವೀನ್ಯ ಮಾರ್ಗಗಳನ್ನು ಬಳಸುವ ತರಬೇತಿ ನೀಡುವುದು, ಕಾರ್ಯಕ್ರಮದ ವೈಶಿಷ್ಟ್ಯಗಳು, ಗಾಳಿ ಒತ್ತಡ, ನೀರಿನ ಶುದ್ಧೀಕರಣ ಕುರಿತಾಗಿ ಕಡಿಮೆ ವೆಚ್ಚದ ವಿಜ್ಞಾನ ಪ್ರಯೋಗ ಪ್ರದರ್ಶನ ಎನ್‌ಸಿಇಆರ್‌ಟಿ ಪಠ್ಯಕ್ರಮಕ್ಕೆ ಹೊಂದುವ ಆಯ್ದ ಚಟುವಟಿಕೆ ಆಧಾರಿತ ಪಾಠಗಳು SEA (Subject Enrichment Activities) ಯೋಜನೆಗೆ ಮಾರ್ಗದರ್ಶನ, ಸಂಪನ್ಮೂಲಗಳ ಬಳಕೆ ಮತ್ತು ಸ್ಪಾರ್ಕ್ ತಜ್ಞರಿಂದ ಸಲಹೆಯನ್ನು ಪಡೆದರು. ಈ ಕಾರ್ಯಾಗಾರವು ಪ್ರಾಯೋಗಿಕ ಚಟುವಟಿಕೆಯಿಂದ ಕೂಡಿದ್ದು ವಿಜ್ಞಾನ ಶಿಕ್ಷಣವನ್ನು ಸಂವಾದಾತ್ಮಕ, ಆಕರ್ಷಕ ಮತ್ತು ಪರಿಕಲ್ಪನೆ ಕೇಂದ್ರಿಕೃತಗೊಳಿಸುವ ಗುರಿಯನ್ನು ಹೊಂದಿದ್ದು. ಈ ತರಬೇತಿಯಲ್ಲಿ ಶಿಕ್ಷಕರು ತಮ್ಮ ಬೋಧನಾ ವಿದಾನ ಹಂಚಿಕೊಂಡು ಸಹಭಾಗಿತ್ವದ ಚರ್ಚೆಯಲ್ಲಿ ಭಾಗವಹಿಸಿದರು.





## ಬಾಲ ಕಾರ್ಮಿಕರ ವಿರೋಧ ದಿನ

ಜೂನ್ 12 ರಂದು ಬಾಲ ಕಾರ್ಮಿಕರ ವಿರೋಧ ದಿನದ ಅಂಗವಾಗಿ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಬಾಲಕಾರ್ಮಿಕರ ಕಠಿಣ ಜೀವನ ವೈಖರಿಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿ, ಮಕ್ಕಳ ಹಕ್ಕುಗಳನ್ನು ರಕ್ಷಿಸುವ ಮಹತ್ವವನ್ನು ಒತ್ತಿ ಹೇಳುವುದು. ಈ ಕಾರ್ಯಕ್ರಮದ ಮುಖ್ಯ ಅಂಗವಾಗಿತ್ತು, ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಭಾಷಣ, ನಾಟಕ ಮತ್ತು ಕವನವಾಚನ ಹೇಳಿದರು. ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಸುರಕ್ಷತೆಯ ಕುರಿತು ಅರಿವು ಮೂಡಿಸಲಾಯಿತು. ಬಾಲಕಾರ್ಮಿಕರ ಸಂಕಷ್ಟಗಳನ್ನು ತೋರಿಸುವ ನಾಟಕವನ್ನು ಪ್ರದರ್ಶಿಸಲಾಯಿತು ಮತ್ತು ಸಮಾಜದಲ್ಲಿ ಪ್ರತಿಯೊಬ್ಬರೂ ವಹಿಸಬಹುದಾದ ಪಾತ್ರದ ಮಹತ್ವವನ್ನು ತಿಳಿಸಲಾಯಿತು..






## ನಿಯೋಜನಾ ಸಮಾರಂಭ ಉದ್ಘಾಟನೆ

ಶಾಲೆಯ ನೂತನ ವಿದ್ಯಾರ್ಥಿಗಳ ನಾಯಕರಿಗೆ ನಿಯೋಜನಾ ಸಮಾರಂಭವು ಜೂನ್ 17, 2025 ರಂದು ನೆರವೇರಿತು. ಈ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಶ್ರೀ ದೀಪನ್.ಎಂ.ಎನ್, ಐಪಿಎಸ್, ಡಿಐಜಿಪಿ, ಕೆಎಸ್‌ಆರ್‌ಪಿ, ಮತ್ತು ಕಾರ್ಯದರ್ಶಿ, ಪಿಪಿಎಸ್ (ಸಿಬಿಎಸ್‌ಇ) ಟ್ರಸ್ಟ್ ಇವರು ಪಾಲ್ಗೊಂಡಿದ್ದರು. ಅವರೊಂದಿಗೆ ಶ್ರೀ ಜನಾರ್ಧನ್.ಆರ್, ಕೆಎಸ್‌ಪಿಎಸ್, 4ನೇ ಪಡೆ, ಕೆಎಸ್‌ಆರ್‌ಪಿ, ಸಹಕಾರ್ಯದರ್ಶಿ, ಪಿಪಿಎಸ್ ಮತ್ತು ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ರಾಧಿಕಾ ಗೋಸ್ವಾಮಿ ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀಮತಿ ಅರ್ಚನಾ ಗುಪ್ತಾ ಉಪಸ್ಥಿತರಿದ್ದರು. ಅತಿಥಿಗಳನ್ನು ವಿದ್ಯಾರ್ಥಿ ನಾಯಕರು ಮತ್ತು ಶಿಕ್ಷಕರು ಗೌರವಯುತವಾಗಿ ವೇದಿಕೆಗೆ ಕರೆತಂದರು. ಈ ಕಾರ್ಯಕ್ರಮವು ಪ್ರಾರ್ಥನೆಯೊಂದಿಗೆ ಆರಂಭವಾಯಿತು. ನಂತರ, ಶ್ರೀಮತಿ ರಾಧಿಕಾ ಗೋಸ್ವಾಮಿ ಅವರು ಹೊಸದಾಗಿ ಆಯ್ಕೆಯಾದ ವಿದ್ಯಾರ್ಥಿ ನಾಯಕರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಮುಖ್ಯ ಅತಿಥಿಗಳು ವಿದ್ಯಾರ್ಥಿ ನಾಯಕರಿಗೆ ಬ್ಯಾಡ್ಜ್ ನೀಡಲಾಯಿತು. ವಿದ್ಯಾರ್ಥಿಗಳು ತಮ್ಮ ಜವಾಬ್ದಾರಿ ನಿರ್ವಹಿಸಲು ಸೂಚಿಸಿದರು. ಶಾಲೆಯ ವಿದ್ಯಾರ್ಥಿ ವಿಭಾಗದ ತಂಡಗಳು ಮತ್ತು ವಾದ್ಯವೃಂದ ತಂಡದೊಡನೆ ಶಿಸ್ತಿನ ಕವಾಯತು ನಡೆಯಿತು. ಮುಖ್ಯ ಅತಿಥಿಗಳು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳ ಪರಿಣಾಮಕಾರಿ ಪಾಲ್ಗೊಳ್ಳುವಿಕೆ ಮತ್ತು ನಾಯಕತ್ವದ ಮೌಲ್ಯಗಳನ್ನು ಹೇಳಿದರು. ಅವರು ಜವಾಬ್ದಾರಿಯುತ ನಾಯಕರಾಗಬೇಕೆಂದು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದರು..















## ತಂದೆಯಂದಿರ ದಿನಾಚರಣೆ

. ಶಾಲೆಯಲ್ಲಿ ಪೂರ್ವಪ್ರಾಥಮಿಕ ಹಂತದ ವಿದ್ಯಾರ್ಥಿಗಳು ಜೂನ್ 16, 2025 ರಂದು ತಂದೆಯಂದಿರ ದಿನವನ್ನು ವಿವಿದ ಚಟುವಟಿಕೆಗಳ ಮೂಲಕ ಕಾರ್ಯಕ್ರಮ ಆಚರಿಸಿದರು. ನರ್ಸರಿ ವಿದ್ಯಾರ್ಥಿಗಳು ಹೆಬ್ಬೆರಳಿನ ಗುರುತುಗಳಿಂದ ಹೃದಯಾಕಾರದ ಆಕೃತಿಗಳನ್ನು ತಯಾರಿಸಿದರು. ಇದು ತಂದೆಯ ಮೇಲೆ ಅವರ ಪ್ರೀತಿಯ ಸುಂದರ ಅಭಿವ್ಯಕ್ತಿಯಾಗಿತ್ತು. ಎಲ್‌ಕೆಜಿ ವಿದ್ಯಾರ್ಥಿಗಳು ತಮ್ಮ ನೈಪುಣ್ಯತೆಯನ್ನು ಪ್ರದರ್ಶಿಸುತ್ತಾ ಕೈಯಿಂದ ತಯಾರಿಸಿದ ಶುಭಾಶಯ ಪತ್ರಗಳ ಮೂಲಕ ತಮ್ಮ ತಂದೆಯರಿಗೆ ವಿಭಿನ್ನ ರೀತಿಯ ಶುಭಾಶಯ ಹೇಳಿದರು. ಯುಕೆಜಿ ವಿದ್ಯಾರ್ಥಿಗಳು ಚಿತ್ರ ಬಿಡಿಸುವ ಹಾಗೂ ಚಿತ್ರಕ್ಕೆ ಬಣ್ಣ ಹಚ್ಚುವ ಸ್ಪರ್ಧೆಯಲ್ಲಿ ಪಾಲ್ಗೊಂಡು ತಮ್ಮ ತಂದೆಯ ಜೊತೆ ಕಳೆದ ಮಧುರ ಕ್ಷಣಗಳನ್ನು ಚಿತ್ರಿಸಿದರು. ಮಕ್ಕಳು ತಂದೆಯಂದಿರ ಬಗ್ಗೆ ಹೊಂದಿರುವ ಪ್ರೀತಿಯ ಅಭಿವ್ಯಕ್ತಿಯು ಸಂತೋಷ ಮತ್ತು ಪ್ರೀತಿಯಿಂದ ತುಂಬಿತ್ತು.



















## ರೋಟರಿ ಕ್ಲಬ್ ವತಿಯಿಂದ ಕಾರ್ಯಕ್ರಮ

18 ಜೂನ್ 2025 ರಂದು ರೋಟರಿ ಕ್ಲಬ್ ಮತ್ತು ಪೊಲೀಸ್ ಪಬ್ಲಿಕ್ ಶಾಲೆಯ ಸಹಯೋಗದಲ್ಲಿ 8ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಅರ್ಥಪೂರ್ಣ ಕಾರ್ಯಕ್ರಮವೊಂದನ್ನು ಆಯೋಜಿಸಲಾಯಿತು. “ಸ್ವಾರ್ಥವನ್ನೂ ಮೀರಿದ ಸೇವೆ” ಎಂಬ ರೋಟರಿ ಮೌಲ್ಯವನ್ನು ಆಧಾರವಾಗಿಟ್ಟುಕೊಂಡು, ಪೂರ್ಣ ಉತ್ಸಾಹ ಹಾಗೂ ಸೇವಾಭಾವನೆ ಸ್ಪಷ್ಟವಾಗಿ ವ್ಯಕ್ತಪಡಿಸಲಾಯಿತು. ಕಾರ್ಯಕ್ರಮದಲ್ಲಿ ರೋಟರಿ ಸದಸ್ಯರು ತಂತ್ರಜ್ಞಾನ ಶಿಕ್ಷಣದಲ್ಲಿ ಸ್ಮಾರ್ಟ್ ಬೋರ್ಡ್ ಬಳಕೆಯ ಮಹತ್ವವನ್ನು ವಿವರಿಸಿದರು. ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ಕಾರ್ಯಕ್ರಮವನ್ನು ಸಜೀವ ಹಾಗೂ ಸಂವಹನಾತ್ಮಕವನ್ನಾಗಿಸಿದರು. ಮುಖ್ಯ ಅತಿಥಿ ಶ್ರೀ ಅರವಿಂದ, ರೋಟರಿ ಡೌನ್‌ಟೌನ್ ಕ್ಲಬ್ ಅಧ್ಯಕ್ಷತೆಯನ್ನು ವಹಿಸಿದ್ದರು ಹಾಗೂ ಸಭೆಯಲ್ಲಿ ಶ್ರೀಮತಿ ಸ್ವರ್ಣಾ ಅನುಪ್, VIAVI ಸಂಸ್ಥೆಯವರು ಮತ್ತು ಇತರೆ ಗಣ್ಯರೂ ಉಪಸ್ಥಿತರಿದ್ದರು.




## ರಾಷ್ಟ್ರೀಯ ಓದುವ ದಿನದ ಆಚರಣೆ

ಜೂನ್ 19 2025 ರಂದು ಶಾಲೆಯಲ್ಲಿ ರಾಷ್ಟ್ರೀಯ ಓದು ದಿನವನ್ನು ಆಚರಿಸಲಾಯಿತು. ಈ ದಿನವನ್ನು ಶ್ರೀ ಪಿ.ಎನ್.ಪಾಣಿಕರ್ ಅವರ ಕೊಡುಗೆಗಳನ್ನು ಸ್ಮರಿಸಿ ಆಚರಿಸಲಾಯಿತು. ಅವರು ಕೇರಳದ ಗ್ರಂಥಾಲಯ ಚಳುವಳಿಯ ಸ್ಥಾಪಕರು. ಈ ವರ್ಷ 30ನೇ ರಾಷ್ಟ್ರೀಯ ಓದು ದಿನವಾಗಿದ್ದು, 2025ರ ಜೂನ್ 19 ರಿಂದ ಜುಲೈ 18ರ ತನಕ ಓದುವ ತಿಂಗಳೆಂದು ಆಚರಿಸಲಾಗುವುದು. ವಿದ್ಯಾರ್ಥಿಗಳಲ್ಲಿ ಓದುವ ಅಭ್ಯಾಸವನ್ನು ಉತ್ತೇಜಿಸಲು ಮತ್ತು ಬೆಳೆಸಲು ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು. ಜೂನ್ 19 ರಂದು ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದ್ದು, ಶಿಕ್ಷಕರ ನೇತೃತ್ವದಲ್ಲಿ ಓದಿನ ದಿನದ ಪ್ರತಿಜ್ಞೆ ಮತ್ತು ರಸಪ್ರಶ್ನೆ ಕಾರ್ಯಕ್ರಮ ನಡೆಸಲಾಯಿತು. ಪೂರ್ವ ಪ್ರಾಥಮಿಕ ವಿದ್ಯಾರ್ಥಿಗಳು “ನನ್ನ ಮೆಚ್ಚಿನ ಪುಸ್ತಕ” ಎಂಬ ಉದ್ದೇಶವುಳ್ಳ ಚಿತ್ರಕಲೆ ಚಟುವಟಿಕೆಯಲ್ಲಿ ಪಾಲ್ಗೊಂಡರು. ಪ್ರಾಥಮಿಕ ತರಗತಿಗಳ ವಿದ್ಯಾರ್ಥಿಗಳು ಪುಸ್ತಕದ ಕವರ್‌ಗಳನ್ನು ವಿನ್ಯಾಸಗೊಳಿಸಿ ಅಥವಾ ತಮ್ಮ ಮೆಚ್ಚಿನ ಕೆಥೆಗಳನ್ನು ಹೇಳುವ ಚಟುವಟಿಕೆಯಲ್ಲಿ ತೊಡಗಿದ್ದರು. 1 ರಿಂದ 6ನೇ ತರಗತಿವರೆಗಿನ ವಿದ್ಯಾರ್ಥಿಗಳು ಮೌನ ಓದು, ಸ್ವತಂತ್ರ ಓದುವ ಅಭ್ಯಾಸ ಹಾಗೂ ಪುಸ್ತಕಗಳೊಂದಿಗೆ ಆಳವಾದ ನಂಟನ್ನು ಬೆಳೆಸುವ ಚಟುವಟಿಕೆಗಳಲ್ಲಿ ಪಾಲ್ಗೊಂಡರು 7 ಮತ್ತು 8ನೇ ತರಗತಿಗಳಲ್ಲಿ ಓದು ದಿನದ ಕುರಿತು ಪ್ರಬಂಧ ಬರೆಯುವ ಸ್ಪರ್ಧೆ ನಡೆಯಿತು. 9 ಮತ್ತು 10ನೇ ತರಗತಿಗಳ ಹಿರಿಯ ವಿದ್ಯಾರ್ಥಿಗಳು “ಆಧುನಿಕ ಕಾಲದಲ್ಲಿ ಓದಿನ ಮಹತ್ವ” ಮತ್ತು “ಡಿಜಿಟಲ್ ಮಾಧ್ಯಮಗಳ ಕಲಿಕೆಯ ಅಭ್ಯಾಸದ ಮೇಲಿನ ಪ್ರಭಾವ” ಎಂಬ ವಿಷಯಗಳ ಬಗ್ಗೆ ಚಿಂತನಾತ್ಮಕ ಪ್ರಬಂಧ ರಚಿಸಿದರು. ಈ ಕಾರ್ಯಕ್ರಮ ವಿಮರ್ಶಾತ್ಮಕ ಚಿಂತನಾ ಶಕ್ತಿಗೆ ಉತ್ತೇಜನ ನೀಡಿತು ಮತ್ತು ಓದುವ ಮಹತ್ವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಲ್ಲಿ ಯಶಸ್ವಿಯಾಯಿತು.



















## ಅಂತಾರಾಷ್ಟ್ರೀಯ ಯೋಗ ದಿನದ ಆಚರಣೆ

ಅಂತರಾಷ್ಟ್ರೀಯ ಯೋಗ ದಿನವನ್ನು ಜೂನ್ 21, 2025 ರಂದು ಪೋಲೀಸ್ ಪಬ್ಲಿಕ್ ಶಾಲೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳು ಮತ್ತು ಸಹೋದ್ಯೋಗಿ ವರ್ಗದವರಿಂದ ಆಚರಿಸಲಾಯಿತು. ಈ ದಿನವು ನಮ್ಮ ದೈಹಿಕ ಶಿಕ್ಷಣ ವಿಭಾಗದ ಮಾರ್ಗದಶಕರಿಂದ ಆಯೋಜಿಸಲಾಯಿತು. ಈ ದಿನವು ನಮ್ಮ ದೈಹಿಕ ಶಿಕ್ಷಣ ವಿಭಾಗದ ಮಾರ್ಗದರ್ಶಕರಿಂದ ಆಯೋಜಿಸಲಾಯಿತು ನಮ್ಮ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಜಯಶ್ರೀ ಮತ್ತು ಸಹೋದ್ಯೋಗಿಯವರು ವರ್ಗದವರು ವಿವಿಧ ಆಸನಗಳನ್ನು ಮತ್ತು ಉಸಿರಾಟದ ವ್ಯಾಯಾಮಗಳನ್ನು ಪ್ರದರ್ಶಿಸಿದರು, ಯೋಗವು ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಸುವಲ್ಲಿ, ಒತ್ತಡವನ್ನು ನಿಭಾಯಿಸುವಲ್ಲಿ ಮತ್ತು ಆರೋಗ್ಯಕರ ಜೀವನಶೈಲಿಯನ್ನು ಕಾಪಾಡಿಕೊಳ್ಳುವಲ್ಲಿ ಪ್ರಮುಖವಾಗಿದೆ ಎಂಬುದನ್ನು ತೋರಿಸಿದರು, ಈ ಆಚರಣೆಯು ಯೋಗದ ಮಹತ್ವವನ್ನು ತಿಳುಸುವ ಉದ್ದೇಶ ಹೊಂದಿತ್ತು. ವಿದ್ಯಾರ್ಥಿಗಳಲ್ಲಿ ಸ್ವಯಂ-ಶಿಸ್ತು, ಆರೋಗ್ಯದ ಕಾಳಜಿ ಬೆಳಸಲು ಸಹಕರಿಯಾಯಿತು.













## ಶಿಕ್ಷಕರಿಗಾಗಿ ಸಿಬಿಎಸ್ಇ ಕಾರ್ಯಾಗಾರ

ಶಿಕ್ಷಕರಿಗಾಗಿ ಸಿಬಿಎಸ್ಇ ವತಿಯಿಂದ ಎನ್ .ಇ.ಪಿ 2020 ರ ಕುರಿತಾಗಿ ಜೂನ್ 16, 2025 ರಂದು ಕಾರ್ಯಗಾರವನ್ನು ಆಯೋಜಿಸಲಾಗಿತ್ತು. ಈ ಸಂವರ್ದನಾ ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಮತಿ ಕಕೋಲಿ ಮುಖರ್ಜಿ ಮತ್ತು ಶ್ರೀಮತಿ ಸಿಂಚನಾ.ಎಂ.ಎಸ್, ಅವರು ನಡೆಸಿಕೊಟ್ಟರು ಇದು ಸೃಜನಶೀಲತೆ, ಸಹಯೋಗ ಮತ್ತು ವಿಮರ್ಶಾತ್ಮಕ ಚಿಂತನಾ.ಎಂ.ಎಸ್, ಅವರು ನಡೆಸಿಕೊಟ್ಟರು. ಇದು ಸೃಜನಶೀಲತೆ, ಸಹಯೋಗ ಮತ್ತು ವಿಮರ್ಶಾತ್ಮಕ ಚಿಂತನೆಯಂತಹ ಅಗತ್ಯ 21ನೇ ಶತಮಾನದ ಕೌಶಲ್ಯಗಳನ್ನು ತಿಳಿಸಿದರು. ಶಿಕ್ಷಕರಿಗೆ ವಿದ್ಯಾರ್ಥಿ ಕೇಂದ್ರಿತ ಕಲಿಕೆ, ಅನುಭವಾತ್ಮಕ ಕಲಿಕೆ ಮತ್ತು ಭಾವನಾತ್ಮಕ-ಆಧಾರಿತ ಮೌಲ್ಯಮಾಪನಗಳನ್ನು ಅಳವಡಿಸಿಕೊಳ್ಳಲು ತರಬೇತಿ ನೀಡಲಾಯಿತು. ಎಲ್ಲಾ ವಿದ್ಯಾರ್ಥಿಗಳಿಗೆ ಸಮಾನ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದರ ಮೇಲೆ ಒತ್ತು ನೀಡಲಾಯಿತು. ಇದು ಲಿಂಗ ಅಸಮಾನತೆ ಅಥವಾ ತಾರತಮ್ಯವನ್ನು ನಿವಾರಿಸುವ ಗುರಿಯನ್ನು ಹೊಂದಿದೆ. ಕಾರ್ಯಾಗಾರವು ಪೂರ್ವಭಾವಿ ಕಲಿಕೆ, ವೃತ್ತಿಪರ ಅಭಿವೃದ್ಧಿ ಮತ್ತು ಕಥೆ ಹೇಳುವ ಮೂಲಕ ಪಠ್ಯಕ್ರಮದಲ್ಲಿ ಸಂಯೋಜಿಸುವ ಮಹತ್ವವನ್ನು ತಿಳಿಸಿತು. ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ತರಬೇತಿ ಪಡೆದ ಶಿಕ್ಷಕರು ಭವಿಷ್ಯದ ನಾಯಕರನ್ನು ರೂಪಿಸುವಲ್ಲಿ ಉತ್ತಮ ಶಿಕ್ಷಕರು ಭವಿಷ್ಯದ ನಾಯಕರನ್ನು ರೂಪಿಸುವಲ್ಲಿ ಉತ್ತಮ ಶೈಕ್ಷಣಿಕ ಅನುಭವಗಳನ್ನು ರಚಿಸಲು ಮಾಹಿತಿ ನೀಡಿದರು.








## ಪ್ರೋತ್ಸಾಹನ -25 ಮಾನ್ಯತೆ

ಬೆಂಗಳೂರು ಸಹೋದಯ ಶಾಲಾ ಸಂಕೀರ್ಣ ಸಂಘ, ಟಿವಿಎಸ್ ಮೋಟಾರ್ಸ್‌ನ ಪ್ರಾಯೋಜಕತ್ವದಲ್ಲಿ ಜೂನ್ 21, 2025 ರಂದು ಸಿಂಧಿ ಹೈ ಸ್ಕೂಲ್, ಹೆಬ್ಬಾಳ್‌ನಲ್ಲಿ ಪ್ರೋತ್ಸಾಹನ-25 ಅನ್ನು ಆಯೋಜಿಸಿತ್ತು. ಈ ಪ್ರತಿಷ್ಠಿತ ಕಾರ್ಯಕ್ರಮವನ್ನು ಎಲ್ಲಾ ಸಿಬಿಎಸ್‌ಇ ಶಾಲೆಗಳಲ್ಲಿ ಉತ್ತಮ ಫಲಿತಾಂಶ ಪಡೆದ ಶಾಲೆಗಳನ್ನು ಗೌರವಿಸಲು ನಡೆಸಲಾಯಿತು. ಸಿಬಿಎಸ್‌ಇ ಬೋರ್ಡ್ ಪರೀಕ್ಷೆಗಳಲ್ಲಿ ಶೇ 100% ಫಲಿತಾಂಶ ಪಡೆದ ಸಾಗರ ಎಸ್ ದಳವಾಯಿ ಅವರು ವಿಜ್ಞಾನ ವಿಷಯದಲ್ಲಿ ಪೂರ್ಣ ಅಂಕ ಗಳಿಸಿದ್ದಕ್ಕಾಗಿ ಪ್ರಮಾಣಪತ್ರ ಮತ್ತು ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು.






## ಮಾದಕ ದ್ರವ್ಯ ಸೇವನೆ ಮತ್ತು ಸೈಬರ್ ಸುರಕ್ಷತೆಯ ಬಗ್ಗೆ ಜಾಗೃತಿ ಕಾರ್ಯಕ್ರಮ

ಮಾದಕ ದ್ರವ್ಯ ಸೇವನೆಯ ಅಪಾಯಗಳು ಮತ್ತು ಸೈಬರ್ ಸುರಕ್ಷತೆಯ ಮಹತ್ವದ ಬಗ್ಗೆ 9ನೇ ತರಗತಿಯ ವಿದ್ಯಾರ್ಥಿಗಳಿಗೆ ಜೂನ್ 23, 2025 ರಂದು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಮಡಿವಾಳ ಆರಕ್ಷಕ ಠಾಣೆಯ ಪೋಲೀಸ್ ಅಧಿಕಾರಿಗಳಾದ ಶ್ರೀ ವಿನೋದ್ ಮತ್ತು ಶ್ರೀ ತಿಮ್ಮರಾಯಪ್ಪ ಅವರು ಮಾದಕ ವಸ್ತುಗಳ ಸೇವನೆಯಿಂದ ದೈಹಿಕ ಮತ್ತು ಮಾನಸಿಕ ಪರಿಣಾಮಗಳ ಕುರಿತು ಮಕ್ಕಳಿಗೆ ಜಾಗೃತಿ ಮೂಡಿಸಿದರು. ಆನ್‌ಲೈನ್ ಅಪಾಯಗಳು, ಸೈಬರ್ ಬೆದರಿಕೆಗಳು ಮತ್ತು ವೈಯಕ್ತಿಕ ಮಾಹಿತಿಯನ್ನು ರಕ್ಷಿಸುವ ಬಗ್ಗೆ ತಿಳಿಸಿದರು. ಸಾಮಾನ್ಯ ತುರ್ತು ಪರಿಸ್ಥಿತಿಗಳಿಗೆ 112 ಹಾಗೂ ಆರ್ಥಿಕ ವಂಚನೆ ಮತ್ತು ಸೈಬರ್ ಅಪರಾಧಗಳ ಬಗ್ಗೆ ತಿಳಿಸಲು 1930 ರಂತಹ ಸಹಾಯವಾಣಿ ಸಂಖ್ಯೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಸುರಕ್ಷಿತ ನಿರ್ಧಾರಗಳನ್ನು ಕೈಗೊಳ್ಳಲು ಮತ್ತು ಸೈಬರ್ ಅಪರಾಧಗಳ ಕುರಿತಾದ ಜ್ಞಾನವನ್ನು ನೀಡುವ ಉದ್ದೇಶವನ್ನು ಹೊಂದಿತ್ತು.





## ವಿಜ್ಞಾನ ಶಿಕ್ಷಕರಿಗಾಗಿ ಸಿಬಿಎಸ್‌ಇ ಕಾರ್ಯಾಗಾರ

2025ರ ಜೂನ್ 23 ಮತ್ತು 24ರಂದು ವಿಜ್ಞಾನ ಶಿಕ್ಷಕರಾದ ಶ್ರೀಮತಿ ವೈಶಾಲಿ.ಎಂ.ಎಸ್ ಮತ್ತು ಶ್ರೀಮತಿ ಕವಿತಾ.ಎಸ್.ಪಿ, ಇವರು ಸುರಾನಾ ವಿದ್ಯಾಲಯ, ಚಂದಾಪುರ ಇಲ್ಲಿ ನಡೆದ ಸಿಬಿಎಸ್‌ಇ ಕಾರ್ಯಾಗಾರದಲ್ಲಿ ಭಾಗವಹಿಸಿದರು. ಈ ಕಾರ್ಯಾಗಾರವು ಪರಿಣಾಮ ಆಧಾರಿತ ಮೌಲ್ಯಮಾಪನ (ಸಿಬಿಎ) ಮತ್ತು FRQs (Creating Free response Question) ಗಳ ತಯಾರಿಕೆಗೆ ಸಂಬಂಧಿಸಿದ್ದು, ವಿಷಯಾಧಾರಿತ ತಿಳುವಳಿಕೆ ಹಾಗೂ ಎನ್‌ಇಪಿ-2020 (ನವ ಶಿಕ್ಷಣ ನೀತಿ) ತತ್ವಗಳನ್ವಯ ತರಬೇತಿಯನ್ನು ಪಡೆದುಕೊಂಡರು.

ಶ್ರೀಮತಿ ಬೃಂದಾ.ಯು.ಎಸ್. ರವರು Capacity Building programme ಯಲ್ಲಿ ಭಾಗವಹಿಸಿದರು. ಈ ಕಾರ್ಯಾಗಾರದ ಪ್ರಮುಖ ಉದ್ದೇಶ ವಿಜ್ಞಾನ ಶಿಕ್ಷಕರಿಗೆ ಪಾಠಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಬೋಧಿಸುವ ತಂತ್ರಗಳನ್ನು ಕಲಿಸುವುದು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅಭಿವ್ಯಕ್ತಿಯನ್ನು ಹೆಚ್ಚಿಸುವುದಾಗಿತ್ತು.



## ರಸ ಪ್ರಶ್ನೆ ಕಾರ್ಯಕ್ರಮ

ಈ ಕಾರ್ಯಕ್ರಮವನ್ನು ರಾಜ್ಯದ ನಾಲ್ಕು ರಾಜ್ಯ ವಂಶಗಳಾದ ಹೊಯ್ಸಳ, ರಾಷ್ಟ್ರಕೂಟ, ಚಾಲುಕ್ಯ, ಕದಂಬ, ಕರ್ನಾಟಕದ ಈ ನಾಲ್ಕು ರಾಜ್ಯ ವಂಶಗಳ ಇತಿಯಾಸ, ಆಳ್ವಿಕೆ, ಕೊಡುಗೆ ಸಂಸ್ಕೃತಿ, ಸಾಧನೆಗಳು, ಶಿಲ್ಪಕಲೆಗಳ ಬಗ್ಗೆ ತಿಳಿದಿರುವ ಜ್ಞಾನದ ಮಟ್ಟವನ್ನು ಪರೀಕ್ಷಿಸಿತು. ಸ್ಪರ್ಧೆಯ ಅಂತಿಮ ಫಲಿತಾಂಶದಲ್ಲಿ ಚಾಲುಕ್ಯ ವಂಶವನ್ನು ಪ್ರತಿನಿಧಿಸಿದ ನೀಲಿ ತಂಡ ಪ್ರಶಸ್ತಿಯನ್ನು ಗೆದ್ದಿರುತ್ತಾರೆ.





## ಪ್ರಾಂಶುಪಾಲರು ಸಿಬಿಎಸ್‌ಇ ಕೌಶಲ ಆಧಾರಿತ ಶಿಕ್ಷಣ ಕಾರ್ಯಾಗಾರದಲ್ಲಿ ಪಾಲ್ಗೊಂಡ ಬಗ್ಗೆ.

ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ರಾಧಿಕಾ ಗೊಸ್ವಾಮಿ ರವರು 2025 ಜೂನ್ 26 ಮತ್ತು 27 ರಂದು ಬೆಂಗಳೂರು ಪರ್ಲ್ ಅಕಾಡೆಮಿಯಲ್ಲಿ ನಡೆದ ಎರಡು ದಿನಗಳ ಕೌಶಲ್ಯದ ತರಬೇತಿಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಈ ತರಬೇತಿ ಕಾರ್ಯಾಗಾರದಲ್ಲಿ ಸಿಬಿಎಸ್‌ಇ ನೈಪುಣ್ಯ ಶಿಕ್ಷಣ ವಿಭಾಗದವರು ಆಯೋಜಿಸಿದ್ದರು, ಇದರ ಉದ್ದೇಶವೆಂದರೆ ಶಾಲಾ ಮುಖ್ಯಸ್ಥರಿಗೆ ಉದ್ಯಮದ ನವೀನ ಪ್ರವೃತ್ತಿಗಳು ಮತ್ತು ವೃತ್ತಿ ಮಾರ್ಗಗಳ ಪರಿಚಯ ನೀಡುವುದು. ಈ ಕಾರ್ಯಕ್ರಮವು ಫ್ಯಾಷನ್, ಡಿಸೈನ್, ಮಾಧ್ಯಮ, ಸಂವಹನ, ಇಂಟೀರಿಯರ್ ಡಿಸೈನಿಂಗ್ ಮತ್ತು ಕೃತಕ ಬುದ್ಧಿಮತೆಯಂತಹ ಕ್ಷೇತ್ರಗಳಿಗೆ ಪ್ರಾಯೋಗಿಕ ಪರಿಚಯವನ್ನು ನೀಡಿತು. ತಮ್ಮ ಅನುಭವವನ್ನು ಹಂಚಿಕೊಂಡ ಶ್ರೀಮತಿ ರಾಧಿಕಾ ಗೋಸ್ವಾಮಿ ರವರು “ಇದು ನಮ್ಮ ವಿದ್ಯಾರ್ಥಿಗಳಿಗೆ ಲಭ್ಯವಿರುವ ಹೊಸ ಹೊಸ ವೃತ್ತಿ ಕೌಶಲ್ಯದ ಬಗ್ಗೆ ಮಾಹಿತಿ ನೀಡಿದ್ದು" ಈ ಕಲಿಕೆಯಲ್ಲಿ ನಾವಿನ್ಯತಾ ದೃಷ್ಟಿಕೋನವನ್ನು ತರಬಹುದಾಗಿರುತ್ತದೆ.








## ಪೊಲೀಸ್ ವಾರ್ಷಿಕ ಕ್ರೀಡಾಕೂಟ 2025

ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳಿಗೆ ಆಯೋಜಿಸಲಾದ 100 ಮೀಟರ್ ಓಟದಲ್ಲಿ ೮ನೇ ತರಗತಿಯ ‘ಬಿ’ ವಿಭಾಗದ ವಿದ್ಯಾರ್ಥಿಯಾದ ವಿಘ್ನೇಶ.ಆರ್.ಎಸ್ ಮೊದಲ ಸ್ಥಾನ ಮತ್ತು ೮ನೇ ತರಗತಿಯ ‘ಡಿ’ ವಿಭಾಗದ ವಿದ್ಯಾರ್ಥಿಯಾದ ಪ್ರಥಮ ಜೈ ಕುಮಾರ್ ಎರಡನೇ ಸ್ಥಾನ ಪಡೆದುಕೊಂಡರು. ಅವರ ಈ ಸಾಧನೆಯು ಕ್ರೀಡಾ ಚಟುವಟಿಕೆಗಳಲ್ಲಿ ಮಕ್ಕಳ ಉತ್ಸಾಹ ಬಿಂಬಿಸುತ್ತದೆ.









## ಬ್ಯಾಗ್ ರಹಿತ ದಿನ

ಪೊಲೀಸ್ ಪಬ್ಲಿಕ್ ಶಾಲೆಯಲ್ಲಿ 28 ಜೂನ್ 2025 ರಂದು ನೂತನವಾಗಿ ಬ್ಯಾಗ್ ರಹಿತ ದಿನ ಆಚರಿಸಲಾಯಿತು. ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಯ ಕಲಿಕೆಗೆ ಅವಕಾಶ ನೀಡಲಾಯಿತು. ಈ ದಿನ ವಿದ್ಯಾರ್ಥಿಗಳಿಗೆ ಉಲ್ಲಾಸಕರ ದಿನವಾಗಿದ್ದು ಎಲ್ಲಾ ತರಗತಿಯ ವಿದ್ಯಾರ್ಥಿಗಳಿಗಾಗಿ ಆಸಕ್ತಿದಾಯಕ ಮತ್ತು ಮನೋರಂಜನಾತ್ಮಕ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. ತರಗತಿ 1 ಮತ್ತು 2 ರ ಮಕ್ಕಳು ಮಿನಿ ಓಲಂಪಿಕ್ಸ್ ನಲ್ಲಿ ಭಾಗವಹಿಸಿದರು. ತರಗತಿ 3 ಮತ್ತು 4 ವಿದ್ಯಾರ್ಥಿಗಳು “ಪ್ರಕೃತಿಯ ಜೊತೆ ಸಂತೋಷದಾಯಕ ಕಲಿಕೆ, ಪ್ರಕೃತಿಯ ಕಡೆಗೆ ನಡಿಗೆ” ಎಂಬ ಉದ್ದೇಶದ ಮೂಲಕ ಕಥೆ ಹೇಳಿಕೆ, ನಿಸರ್ಗ ವೀಕ್ಷಣೆ, ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿದರು. ತರಗತಿ 5 ಮತ್ತು 6 ರವರು “ಬೆಂಕಿ ಇಲ್ಲದೆ ಅಡುಗೆ ಮಾಡುವುದರ ಕುರಿತು ಜೀವನ ಕೌಶಲ್ಯಗಳನ್ನು” ಕಲಿತರು. 7, 8 ಮತ್ತು 9ನೇ ತರಗತಿ ವಿದ್ಯಾರ್ಥಿಗಳು “ವೃತ್ತಿ ಕೌಶಲ್ಯ ಮಾಹಿತಿ” ಎಂಬ ಉದ್ದೇಶ ನಡಿ ವೃತ್ತಿ ಮಾರ್ಗದರ್ಶನ ಕಾರ್ಯಾಗಾರದಲ್ಲಿ ಪಾಲೊಂಡು, ಭವಿಷ್ಯದ ಉದ್ಯೋಗ ಮಾರ್ಗಗಳನ್ನು ತಿಳಿದುಕೊಂಡರು. ತಮ್ಮ ಆಸೆ-ಆಕಾಂಕ್ಷೆಗಳನ್ನು ಹಂಚಿಕೊಂಡರು. ಈ ಬ್ಯಾಗ್ ರಹಿತ ದಿನದ ಸಂತೋಷಭರಿತ, ಸಮಗ್ರ ಕಲಿಕೆಯ ಮನೋಭಾವವನ್ನು ಅರಿತರು.










## ಕೆಂಪು ದಿನದ ಆಚರಣೆ

ಪೊಲೀಸ್ ಪಬ್ಲಿಕ್ ಶಾಲೆಯ ಪೂರ್ವ ಪ್ರಾಥಮಿಕ ವಿದ್ಯಾರ್ಥಿಗಳು 28 ಜೂನ್ 2025 ರಂದು ಉತ್ಸಾಹದಿಂದ ರೆಡ್ ಡೇ ಅನ್ನು ಆಚರಿಸಿದರು. ಕೆಂಪು ಬಣ್ಣದ ಬಟ್ಟೆ ತೊಟ್ಟ ಮಕ್ಕಳು ಸೇಬು, ಸ್ಟ್ರಾಬೆರಿ, ಕಲ್ಲಂಗಡಿ, ಹಣ್ಣುಗಳು ತೋರುವಂತೆ ಪ್ರದರ್ಶನ ಮಾಡಿದರು. ಕೊಠಡಿಗಳನ್ನು ಕೆಂಪು ಬಣ್ಣದ ಅಲಂಕಾರ, ಆಟಿಕೆ, ಪ್ರದರ್ಶನಗಳಿಂದ ಕಂಗೊಳಿಸಿದವು. ಶಿಕ್ಷಕರು ಮಕ್ಕಳಿಗೆ ಕೆಂಪು ಬಣ್ಣ ಬಿಂಬಿಸುವ ಪಾಠಗಳು, ಹಾಡುಗಳು, ರಚನಾತ್ಮಕ ಚಟುವಟಿಕೆಗಳು ಹೂದಾನಿಗಳು ತಯಾರಿಕೆ (ನರ್ಸರಿ), ವಿವಿಧ ಆಕೃತಿಗಳನ್ನು ಕೆಂಪು ಬಣ್ಣದಿಂದ ತಯಾರಿಸಿದರು.













## ವೃತ್ತಿ ಪರ ಮಾರ್ಗದರ್ಶನದ ಕಾರ್ಯಾಗಾರ

28 ಜೂನ್ 2025 ರಂದು “Vocational Voyage” ಎಂಬ ಶೀರ್ಷಿಕೆಯಡಿ ವೃತ್ತಿಪರ ಮಾರ್ಗದರ್ಶನದ ಕಾರ್ಯಾಗಾರ ನಡೆಸಲಾಯಿತು. ಈ ಕಾರ್ಯಕ್ರಮವನ್ನು ಶ್ರೀ ದೀಪನ್.ಎಂ.ಎನ್, ಐಪಿಎಸ್, ಡಿಐಜಿಪಿ ಕೆಎಸ್ಆರ್‌ಪಿ, ಮತ್ತು ಕಾರ್ಯದರ್ಶಿ, ಪಿಪಿಎಸ್ ಉದ್ಘಾಟಿಸಿದರು. ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಭವಿಷ್ಯದ ಅರಿವು ಸೃಜನಶೀಲತೆ, ವೃತ್ತಿಪರ ಮಾರ್ಗದರ್ಶನ ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಶ್ರೀ ದೀಪನ್.ಎಂ.ಎನ್, ಐಪಿಎಸ್ ಇವರು ವೃತ್ತಿಪರ ಆಯ್ಕೆಗಳ ಮಹತ್ವಗಳ ಕುರಿತು ಪ್ರೋತ್ಸಾಹದಾಯಕ ಭಾಷಣ ಮಾಡಿದರು. ಪ್ರಜಾವಾಣಿ ಪತ್ರಿಕೆಯ ಹಿರಿಯ ಪತ್ರಕರ್ತೆ ಶ್ರೀಮತಿ ರಶ್ಮಿ ರವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅವರು ಪತ್ರಿಕೋದ್ಯಮ ಕ್ಷೇತ್ರದ ಬಗ್ಗೆ ಅವರ ಅನುಭವಗಳನ್ನು ತಿಳಿಸಿದರು. ವಿದ್ಯಾರ್ಥಿಗಳು ತಮ್ಮ ಆಸಕ್ತಿಯ ಕ್ಷೇತ್ರವನ್ನು ಗುರುತಿಸಬೇಕು ಎಂದು ಕಿವಿಮಾತು ಹೇಳಿದರು.




